ಗೊತ್ತಿದೆ. ಕಣ್ಣಾರೆ ಈ ದೃಶ್ಯಗಳನ್ನೆಲ್ಲಾ, ಆಕೃತ್ಯಗಳನ್ನೆಲ್ಲಾ ನೀವು ನೋಡಿರತಕ್ಕಂಥವರು, ಆದುದರಿಂದ ನಾನು ಖಂಡಿತ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ದಯವಿಟ್ಟು ಈಗ ತಾವು ಕುಳಿತುಕೊಳ್ಳಿ.

ಗಮನ ಸೆಳೆಯುವ ಸೂಚನೆಗಳು

ಲೋಕೋಪಯೋಗಿ ಇಲಾಖೆಯಿಂದ ರಾಜ್ಯದ ಅನೇಕ ಭಾಗಗಳಲ್ಲಿ ಸಣ್ಣ ನೀರಾವರಿ ಇಲಾಖೆಯನ್ನು ಬೇರ್ಪಡಿಸಿ ಉಪ ವಿಭಾಗಗಳನ್ನು ರಚಿಸಿರುವುದು.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಶ್ರೀ ವಿಜಯ ಶಂಕರ್‌ರವರ ಪರವಾಗಿ ಇತ್ತೀಚೆಗೆ ಲೋಕೋಪಯೋಗಿ ಇಲಾಖೆಯಿಂದ ರಾಜ್ಯದ ಅನೇಕ ಭಾಗಗಳಲ್ಲಿ ಸಣ್ಣ ನೀರಾವರಿ ಇಲಾಖೆಯನ್ನು ಬೇರ್ಪಡಿಸಿ ಉಪವಿಭಾಗಗಳನ್ನು ರಚಿಸುವ ಬಗ್ಗೆ ಸನ್ಮಾನ್ಯ ಸಣ್ಣ ನೀರಾವರಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) : ಸರ್ಕಾರಿ ಆದೇಶ ಸಂಖ್ಯೆ : ನೀಇ 56 ಸನೀರಾ 95, ದಿನಾಂಕ : 29-5-96 ರಲ್ಲಿ ಲೋಕೋಪಯೋಗಿ ಇಲಾಖೆಯಿಂದ ವರ್ಗಾವಣೆ ಹೊಂದಿದ ಉಪ ವಿಭಾಗಗಳನ್ನು ಸಣ್ಣನೀರಾವರಿ ಉಪ ವಿಭಾಗಗಳೆಂದು ಪರಿವರ್ತಿಸಲಾಯಿತು. ಹೀಗೆ ವರ್ಗಾವಣೆಯಾದ 13 ಉಪ ವಿಭಾಗಗಳ ಪೈಕಿ ಪಿರಿಯಾಪಟ್ಟಣದಲ್ಲಿದ್ದ ಲೋಕೋಪಯೋಗಿ ಇಲಾಖೆಯ ಉಪ ವಿಭಾಗವು ಒಂದಾಗಿದೆ. ಇದನ್ನು ಸಣ್ಣ ನೀರಾವರಿ ಉಪ ವಿಭಾಗವನ್ನಾಗಿ ಪರಿವರ್ತಿಸಿ ಅಲ್ಲಿಯೇ ಮುಂದುವರೆಸಲಾಯಿತು.

ನಂತರ ಸರ್ಕಾರಿ ಆದೇಶ ಸಂಖ್ಯೆ : ನೀಇ 56 ಸನೀರಾ 95, ದಿನಾಂಕ : 19-5-97 ರಲ್ಲಿ 30 ಹೊಸ ಸಣ್ಣ ನೀರಾವರಿ ಉಪ ವಿಭಾಗಗಳನ್ನು ರಚಿಸಲಾಯಿತು. ಉಪ ವಿಭಾಗಗಳನ್ನು ರಚಿಸುವಾಗ ಕೆಲಸದ ಪ್ರಮಾಣ ಮತ್ತು ನಬಾರ್ಡ್ ಕಾಮಗಾರಿಗಳ ಆಧಾರದ ಮೇಲೆ ಉಪ ವಿಭಾಗಗಳ ಕೇಂದ್ರ ಸ್ಥಾನಗಳನ್ನು ನಿಗದಿಪಡಿಸಲಾಗಿದೆ. ಈ ಆದೇಶದಲ್ಲಿ ಪಿರಿಯಾ ಪಟ್ಟಣದಲ್ಲಿದ್ದ ಸಣ್ಣ ನೀರಾವರಿ ಉಪ ವಿಭಾಗವನ್ನು ಹುಣಸೂರಿಗೆ ವರ್ಗಾಯಿಸಲಾಗಿದೆ. ಹುಣಸೂರು ತಾಲ್ಲೂಕಿನಲ್ಲಿ ನೀರಾವರಿಗೆ ಒಳಪಟ್ಟಿರುವ ಪ್ರದೇಶ ಹೆಚ್ಚಾಗಿ ಇರುವುದು.

ಆದರೆ ಭೌಗೋಳಿಕ ಹಾಗೂ ಕಾರ್ಯನಿರ್ವಹಣೆಯ ದೃಷ್ಟಿಯಿಂದ ಕೆಲವು ಉಪ ವಿಭಾಗಗಳ ಕೇಂದ್ರಸ್ಥಾನ ಮತ್ತು ಅವುಗಳಿಗೆ ವಹಿಸುವ ತಾಲ್ಲೂಕುಗಳಲ್ಲಿ ಕೆಲವು ಬದಲಾವಣೆ ಮಾಡುವುದು ಹಾಗೂ ಬಿಟ್ಟುಹೋದ ತಾಲ್ಲೂಕುಗಳನ್ನು ಸೇರಿಸುವುದು ಅಗತ್ಯವೆಂದು ಕಂಡುಬಂದಿತು. ಆದುದರಿಂದ, ಸರ್ಕಾರಿ ಆದೇಶ ಸಂಖ್ಯೆ : ನೀಇ 55 ಸನೀರಾ 97, ದಿನಾಂಕ : 5-7-97 ರಲ್ಲಿ ಈ 43 ಉಪ ವಿಭಾಗಗಳ ಕೇಂದ್ರ ಸ್ಥಾನವನ್ನು ಅವುಗಳ ಕಾರ್ಯವ್ಯಾಪ್ತಿಯನ್ನು ಪುನರ್‌ನಿಗದಿಪಡಿಸಲಾಯಿತು. ಆದುದರಿಂದ ಹುಣಸೂರಿನಲ್ಲಿದ್ದ ಉಪ ವಿಭಾಗವನ್ನು ಮಡಿಕೇರಿಗೆ ವರ್ಗಾಯಿಸಲಾಯಿತು.

ಸಣ್ಣ ನೀರಾವರಿ ಇಲಾಖೆಯ ಕಾಮಗಾರಿಗಳನ್ನು ಯಶಸ್ವಿಯಾಗಿ ಹಾಗೂ ಸಮರ್ಪಕವಾಗಿ ನಡೆಸಲು ಇನ್ನೂ ಹೊಸ ಉಪ ವಿಭಾಗಗಳನ್ನು ಪ್ರಾರಂಭ ಮಾಡಲು ಪ್ರಸ್ತಾವನೆಯೊಂದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಈ ಉಪವಿಭಾಗಗಳನ್ನು ಹೊಸದಾಗಿ ವಿಂಗಡಣೆ ಮಾಡುವಂಥ ಸಂದರ್ಭದಲ್ಲಿ ಅನೇಕ ನ್ಯೂನತೆಗಳು ಆಗಿವೆ. ಆದರೆ ಇವರು ಭೌಗೋಳಿಕವಾದ ಕಾರಣ ಎಂದು ಹೇಳುತ್ತಿದ್ದಾರೆ. ಮಡಿಕೇರಿ ಮತ್ತು ಹುಣಸೂರು ಬಹಳಷ್ಟು ದೂರದಲ್ಲಿದೆ. ಹುಣಸೂರಿನಲ್ಲಿ ಆಗಬೇಕಾದ ಕಾಮಗಾರಿಗಳು ಬಹಳಷ್ಟು ಇವೆ. ದಯಮಾಡಿ ಅದನ್ನು ಹುಣಸೂರಿನಲ್ಲಿಯೇ ಉಳಿಸಬೇಕೇ ಹೊರತು ಅದನ್ನು ಮಡಿಕೇರಿಗೆ ವರ್ಗಾಯಿಸಬಾರದು. ಮಡಿಕೇರಿಗೆ ಬೇಕಾದರೆ ಪ್ರತ್ಯೇಕವಾದ ವಿಭಾಗವನ್ನೇ ಮಾಡುವುದಕ್ಕೆ ಏನೂ ತೊಂದರೆಯಿಲ್ಲ, ಅಲ್ಲೂ ಮಾಡಬೇಕಾಗುತ್ತದೆ. ಹೀಗೆಯೇ ರಾಜ್ಯದ ಅನೇಕ ಕಡೆ ಆಗಿದೆ. ತೀರ್ಥಹಳ್ಳಿಯಲ್ಲೂ ಕೂಡ ಮೈನರ್ ಇರಿಗೇಷನ್ ಮೇಲೆಯೇ ಅವಲಂಬಿತರಾಗಿದ್ದೇವೆ. ಅಲ್ಲಿ ಯಾವುದೇ ಮೇಜರ್ ಇರಿಗೇಷನ್ ಇಲ್ಲ. ತುಂಗಾ ನದಿಯ ದಡದಲ್ಲಿದ್ದೇವೆ. ನಾನು ಮತ್ತು ಕೊಪ್ಪಳದಲ್ಲಿರತಕ್ಕಂಥ ಗೋವಿಂದೇಗೌಡರು, ನಾವೆಲ್ಲಾ ತುಂಗಾ ನದಿಯ ದಡದ ಮೇಲಿದ್ದು ನೀರಿಗೋಸ್ಕರ ಕಣ್ಣೀರು ಹಾಕತಕ್ಕಂಥ ಪರಿಸ್ಥಿತಿಯಲ್ಲಿದ್ದೇವೆ. ಅಲ್ಲಿ ಉಪ ವಿಭಾಗಗಳನ್ನು ತೆರೆದಿಲ್ಲ. ಉದಾಹರಣೆಗೆ ಹೇಳಬೇಕೆಂದರೆ ಹೊಸನಗರ ತಾಲ್ಲೂಕನ್ನು ಶಿಕಾರಿಪುರಕ್ಕೆ ಸೇರಿಸಿದ್ದೀರಿ. ಅಲ್ಲಿಗೆ ಬೆಳಿಗ್ಗೆ ಹೊರಟರೆ ತಲುಪುವುದೇ ಸಾಯಂಕಾಲವಾಗುತ್ತದೆ. ಸುಮಾರು ಒಂದು ದಿನವೇ ಹೋಗಿಬರುವುದಕ್ಕೆ ಬೇಕಾಗುತ್ತದೆ. ತೀರ್ಥಹಳ್ಳಿಗೆ ಶಿವಮೊಗ್ಗವೆಂದು ಸೇರಿಸಿದ್ದೀರಿ, ಆದುದರಿಂದ ಹೊಸನಗರ ಮತ್ತು ತೀರ್ಥಹಳ್ಳಿಯನ್ನು ಸೇರಿಸಿ, ತೀರ್ಥಹಳ್ಳಿಯಲ್ಲಿ ಒಂದು ಹೊಸ, ಉಪ ವಿಭಾಗವನ್ನು ತೆರೆಯಬೇಕು ಮತ್ತು ಹುಣಸೂರಿನಲ್ಲಿರತಕ್ಕಂಥ ಉಪ ವಿಭಾಗವನ್ನು ಅಲ್ಲಿಯೇ ಉಳಿಸಿಕೊಳ್ಳಬೇಕೇ ಹೊರತು ಮಡಿಕೇರಿಗೆ ವರ್ಗಾಯಿಸಬಾರದು. ನೀವು ಬೇಕಾದರೆ ಮಡಿಕೇರಿಗೆ ಹೊಸ ಉಪ ವಿಭಾಗವನ್ನೇ ತೆರೆಯಿರಿ ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಅಲ್ಲಿದೆ ಮೈನರ್ ಇರಿಗೇಷನ್ ಕೆರೆ ಕಟ್ಟೆಗಳು ಮತ್ತು ಪಿಕ್‌ಅಪ್ ಗಳ ಆಧಾರದ ಮೇಲೆ ವ್ಯವಸಾಯ ಮಾಡುತ್ತಿರತಕ್ಕ ನಮ್ಮ ಮಲೆನಾಡಿನ ಈ ಭಾಗದ ತಾಲ್ಲೂಕುಗಳಿಗೆ ದಯಮಾಡಿ ಸಹಾಯ ಮಾಡಬೇಕೆಂದು ಮಾನ್ಯ ಸಣ್ಣ ನೀರಾವರಿ ಸಚಿವರನ್ನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ತಿಪ್ಪೇಸ್ವಾಮಿ : ಸನ್ಮಾನ್ಯ ಅಧ್ಯಕ್ಷರೆ, ನನಗೆ ರಾಜ್ಯದಲ್ಲಿಯ 175 ತಾಲ್ಲೂಕುಗಳಲ್ಲಿ ಸಣ್ಣ ನೀರಾವರಿ ಉಪ ವಿಭಾಗಗಳನ್ನು ಮಾಡಬೇಕೆಂದು ಕೇಳಿದಾಗ ನನಗೆ ಕೊಟ್ಟಿದ್ದು 35 ಉಪವಿಭಾಗಗಳನ್ನು ಮಾತ್ರ. ಇವುಗಳನ್ನು ಹಂಚುವ ಸಂದರ್ಭದಲ್ಲಿ ಮಾನ್ಯ ಸದಸ್ಯರು ಕೇಳುವ ಪ್ರಶ್ನೆ ಬಹಳ ಸಮಂಜಸವಾಗಿದೆ. ನ್ಯಾಯಯುತವಾಗಿದೆ. ನಾನು ಹುಣಸೂರಿಗೆ ಉಪ ವಿಭಾಗವನ್ನು ಕೊಡಲು ಸಮ್ಮತಿಸುತ್ತೇನೆ. ಇವುಗಳನ್ನು ಹಂಚುವಲ್ಲಿ ಸ್ವಲ್ಪ ಹೆಚ್ಚಿನ ಬೇಡಿಕೆ ಇದೆ. ನಾನು ಸನ್ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿದ್ದೇನೆ. ಅವರು ಇನ್ನು ಸ್ವಲ್ಪ ಹೆಚ್ಚು ಕೊಡುತ್ತೇನೆ ನೀವು ಎಲ್ಲರಿಗೂ ಹಂಚಿ ಎಂದು ಹೇಳಿದ್ದಾರೆ. ಸನ್ಮಾನ್ಯ ಸದಸ್ಯರು ಇಟ್ಟಿರುವ ಬೇಡಿಕೆಯನ್ನು ನಾನು ಪೂರೈಸಿಕೊಡುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ : ತೀರ್ಥಹಳ್ಳಿಗೆ ದಯವಿಟ್ಟು ವ್ಯತ್ಯಾಸಮಾಡಬಾರದು, ಆದಷ್ಟು ಬೇಗನೇ ಉಪ ವಿಭಾಗವನ್ನು ಮಾಡಿಕೊಡಬೇಕು.

ಅಧ್ಯಕ್ಷರು : ಹುಣಸೂರಿನದು ಮಾಡಿಕೊಡುತ್ತಾರೆ, ನೀವು ತೀರ್ಥಹಳ್ಳಿಯವರು ಶಿಕಾರಿಪುರಕ್ಕೆ ಹೋಗಬೇಕು, ನಿಮ್ಮ ಲೀಡರ್ ಇರುವ ಊರಿಗೆ ಹೋಗುವುದಿಲ್ಲ ಎಂದರೆ ಹೇಗೆ?

ಶ್ರೀ ಅರಗ ಜ್ಞಾನೇಂದ್ರ : ತಮಗೆ ಗೊತ್ತೇ ಇದೆ ಅಲ್ಲಿಗೆ ಹೋಗುವುದು, ಹೊಸ ನಗರ, ತೀರ್ಥಹಳ್ಳಿಗೆ ದೊಡ್ಡಪ್ರಮಾಣದ ನೀರಾವರಿ ಇದೆ. ಅದಕ್ಕೋಸ್ಕರ ತೀರ್ಥಹಳ್ಳಿಗೆ ಉಪ ವಿಭಾಗವನ್ನು ಮಾಡಿಕೊಡಿ ಎಂದು ಕೇಳುತ್ತೇನೆ.

ಅಧ್ಯಕ್ಷರು : ಮೇಲು ನೋಟಕ್ಕೆ ಹೇಳಿದರೂ ಕೂಡ ನಾವು ಅದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ನಿಮ್ಮ ಲೀಡರ್ ಇರುವ ಊರಿಗೆ ಹೋಗುವುದಿಲ್ಲ ಎಂದರೆ ಹೇಗೆ?

ಶ್ರೀ ಅರಗ ಜ್ಞಾನೇಂದ್ರ : ಹೋಗುವುದಕ್ಕೆ ಏನೂ ತೊಂದರೆ ಇಲ್ಲ. ಅದು ಭೌಗೋಳಿಕವಾಗಿ ತೀರ್ಥಹಳ್ಳಿ ಯಾವ ಮೂಲೆಯಲ್ಲಿ ಇದೆ, ಶಿಕಾರಿಪುರ ಯಾವ ಮೂಲೆಯಲ್ಲಿ ಇದೆ ಎಂಬುದು ತಮಗೆ ಗೊತ್ತೇ ಇದೆ. ಅಲ್ಲಿ ಲಿಫ್ಟ್ ಇರಿಗೇಷನ್‌ನಲ್ಲಿ ಏನಾದರೂ ರೀಪೇರಿ ಬಂದರೆ ಅದನ್ನು ದುರಸ್ತಿ ಮಾಡಿಸಲು ನಾವು ಇಂಜಿನಿಯರನ್ನು ಹುಡುಕುವುದು ಕಷ್ಟವಾಗುತ್ತದೆ.

ಅಧ್ಯಕ್ಷರು : ತಿಪ್ಪೇಸ್ವಾಮಿಯವರೇ ಅದನ್ನು ಪರಿಶೀಲನೆ ಮಾಡಿ.

ಶ್ರೀ ಅರಗ ಜ್ಞಾನೇಂದ್ರ : ನೀವು ನೀರಾವರಿ ಸೌಲಭ್ಯ ಇದ್ದಲ್ಲಿ ಉಪ ವಿಭಾಗಗಳನ್ನು ತೆರೆಯದೆ ಇದ್ದರೂ ಚಿಂತೆಯಿಲ್ಲ, ನಮ್ಮ ಮಲೆನಾಡಿನಲ್ಲಿ ನೀರಾವರಿ ಇಲ್ಲದೆ, ಇರತಕ್ಕಂಥ ತೀರ್ಥಹಳ್ಳಿಯಲ್ಲಿ ತೆರೆಯದೆ ಇದ್ದರೆ ನಮಗೆ ನ್ಯಾಯ ಹೇಗೆ ದೊರೆಯುತ್ತದೆ.

ಅಧ್ಯಕ್ಷರು : ತಿಪ್ಪೇಸ್ವಾಮಿಯವರೇ, ಹುಣಸೂರನ್ನು ಮಾಡಿಕೊಡುತ್ತೇವೆ ಎಂದು ಭರವಸೆ ಕೊಡಿ, ತೀರ್ಥಹಳ್ಳಿಯನ್ನು ಪರಿಶೀಲನೆ ಮಾಡಿ ಅದನ್ನೂ ಮಾಡಿ ಕೊಡುತ್ತೇವೆ ಎಂದು ಹೇಳಿ.

ಶ್ರೀ ತಿಪ್ಪೇಸ್ವಾಮಿ : ಸರ್, ಎರಡೂ ಮಾಡಲು ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು : ಶ್ರೀಯುತರುಗಳಾದ ಡಿ.ಆರ್. ಪಾಟೀಲ್, ಜಗದೀಶ್ ಶೆಟ್ಟರ್, ಅಶೋಕ್ ಚಕಾಟ್ವೆ, ಜಿ.ಟಿ. ಪಾಟೀಲ್ ಹಾಗೂ ಯು.ಬಿ. ಬಣಕಾರ್ ಇವರುಗಳು ತಮ್ಮ ಗಮನಸೆಳೆಯುವ ಸೂಚನೆಯನ್ನು ಮಂಡಿಸಬೇಕು.

ಹುಬ್ಬಳ್ಳಿ, ಗುಲ್ಬರ್ಗಾ, ಕಾರ್ಪೋರೇಷನ್ ಸ್ಥಾಪನೆಯನ್ನು ಸಾರಿಗೆ ಸಚಿವರು ಮುಂದೂಡಿರುವುದು.

ಶ್ರೀ ಡಿ.ಆರ್. ಪಾಟೀಲ್ (ಗದಗ) : ದಿನಾಂಕ 15-8-97ರಿಂದ ಬೆಂಗಳೂರು ನಗರ ಸಾರಿಗೆಯನ್ನು ಹೊಸ ಕಾರ್ಪೋರೇಷನ್ ಆಗಿ ಪ್ರಾರಂಭಿಸಲು ಕ್ರಮ ಕೈಗೊಂಡು, ಹುಬ್ಬಳ್ಳಿ, ಗುಲ್ಬರ್ಗಾ ಕಾರ್ಪೋರೇಷನ್ ಸ್ಥಾಪನೆಯನ್ನು ಮುಂದೂಡಿರುವ ಬಗ್ಗೆ ಸಾರಿಗೆ ಸಚಿವರ ಗಮನವನ್ನು ಸೆಳೆಯುತ್ತೇನೆ.